**ಓ ಎಸ್ ನಂಃ 502/2023**
**ಪಿ ಡಬ್ಲ್ಯು ಃ 1**

**ದಿಃ 16.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಎಸ್ ಜಿ ಯು ವಕೀಲರಿಂದಃ-**

ನಿಪಿ 1 ಕ್ರಯದ ಕರಾರು ಪತ್ರವನ್ನು ಪ್ರತಿವಾದಿ ಹಣದ ಭದ್ರತೆಗಾಗಿ ಮಾಡಿಕೊಟ್ಟಿರುವ ಕಾರಣ ಪ್ರತಿವಾದಿ ತಮಗೆ ಮತ್ತು ತಮ್ಮ ಅಣ್ಣನಿಗೆ ಬಡ್ಡಿಯನ್ನು ಹಣದ ರೂಪದಲ್ಲಿ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ತಾವು ಸಹ ಪ್ರತಿವಾದಿಯಿಂದ ಬಡ್ಡಿ ರೂಪದಲ್ಲಿ ಪಡೆದಿದ್ದೀರಿ ಹಾಗೂ ದಿಃ 11.07.2022 ರಲ್ಲಿ ಪ್ರತಿವಾದಿ ತಮಗೆ ಬಡ್ಡಿ ಹಣವನ್ನು ಫೋನ್ ಪೇ ಮೂಲಕ ಪಾವತಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಉದ್ದೇಶಕ್ಕಾಗಿ ತಾವು ದಿಃ 01.05.2022 ರಿಂದ ದಿಃ 04.08.2023 ರ ವರಗೆ ತಾವು ತಮ್ಮ ಬ್ಯಾಂಕ್ ಖಾತೆಯ ಸ್ಟೇಟ್ ಮೆಂಟ್ ಎಕ್ಸ್ಟ್ರಾಟ್ ನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಸುಮಾರು ರೂ. 35,00,000/- ಬೆಲೆ ಬಾಳುವ ಸ್ವತ್ತಾಗಿರುವ ಕಾರಣ ತಾವು ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**